

# ಮಗಳು, ಮಗಳನ್ನ ಹಡೆದ ಮನೆ…

ಅದು ಧಾರವಾಡದ ಮಳೆಯ ದಿನವೆಂದರೆ, ನರಸಿಂಹಸ್ವಾಮಿಗಳ 'ಮೊದಲ ದಿನ ಮೌನ'... ಹೌದು ನಾನು ಸಾಕಷ್ಟು ಊರುಗಳಲ್ಲಿ ಇದ್ದು, ಬದುಕಿ, ಸಾಕಷ್ಟು ಮಳೆ, ಮಳೆಗಾಲ ಕಂಡದ್ದಾಗಿದೆ. ನಮ್ಮೂರಿನ ಅಂದರೆ ಧಾರವಾಡ ಮಳೆಯ ಅಮೋಘ, ಅಪರಿಮಿತ, ಅಪರಂಪಾರ, ಮಧುರ, ಮೃದು, ಧುಮು, ಝುಮುರು ಹೀಗೆ ಹತ್ತವತಾರಗಳು ಭೀಮಸೇನ ಜೋಶಿಯವರದ್ದೋ, ಗಂಗೂಬಾಯಿ ಹಾನಗಲ್ಲರದೋ, ಇಬ್ಬರದೂ ಮರೆತಾಗ ಮಲ್ಲಿಕಾರ್ಜುನ ಮನಸೂರರದ್ದೋ, ಅದೂ ಶೃತಿಗೊಳ್ಳದಿದ್ದಾಗ ರಾಜಗುರುಗಳದ್ದೋ ಆಲಾಪ ಹಿಡಿದು, ತೆಕ್ಕೆ ಬಡಿದು, ಸುಶ್ರಾವ್ಯ ಸುರಿವ, ಸುರಿಸುರಿಯುತ್ತಲೇ ತಂಪು ಹಣಿಸುವ, ತಂಪಿಸುತ್ತಲೇ ಮೆಲು ಬಿಸಿಲಾಗುವ ಈ ಮಳೆಯ ನೋಡುವುದು ಒಂದು ಅದೃಷ್ಟ, ಕೇಳುವುದೊಂದು ಸೌಭಾಗ್ಯ, ಮೀಯುವುದು ಆಜನ್ಮ ಪುಣ್ಯ.

ಸದ್ಯ...

ವೈಜ್ಞಾನಿಕ ವಿಶ್ಲೇಷಣೆಯಂತೆ ಕಾಡು ಕಡಿದ ಪರಿಣಾಮದಿಂದಾಗಿ ಮಳೆ ಕನಸಾಗುತ್ತದೆ, ನೀರಿನ ಹಾಹಾಕಾರ ಎಂಬುದೆಲ್ಲ ತಿಳಿದು ಆವರಿಸುವ ಭಯವನ್ನ, ತಿಥಿ ನಕ್ಷತ್ರಕ್ಕೂ ಮೊದಲೆ, ಅಂದಾಜಿಗಿಂತ ತುಸು ಹೆಚ್ಚೆ ಹನಿವ ಹನಿಗಳಿಗೆ ಅದ್ಯಾವ ನಿಯಮ ಮೀರಿ ತಮ್ಮನ್ನು ಸಾಬೀತು ಪಡಿಸಿಕೊಳ್ಳುವ ಹಟವೋ? ಅಥವಾ ಧಾರವಾಡ ಮಳಿ ನಂಬಬಾರದು ಎನ್ನುವ ನಂಬಿಕೆಯನ್ನ ಧಾರವಾಡಿಗರು ಕಳೆದುಕೊಳ್ಳಬಾರದೆಂಬ ಮಳೆಯ ನಂಬಿಕೆಯೋ, ಇಂಥ ನಂಬಿಗಸ್ಥ ಮಳೆಯ ನಂಬದಿರುವುದು ಹೇಗೆ?

ಯುಗಾದಿ... ಮುಗಿದು, ಮೇ ಫ್ಲವರ್, ಗುಲ್ಮೊಹರ್ ತಮ್ಮ ಯೌವನಾವಸ್ಥೆಯ ಜೊತೆಗೆ ಗೃಹಸ್ಥಾಶ್ರಮ ಮುಗಿಸಿ, ವಾನಪ್ರಸ್ಥಕ್ಕೆ ಕಾಲಿಡುವ ಹಿಂದಿನ ಒಂದು ಹೆಜ್ಜೆ ಎತ್ತಿಡುವ ಹೊತ್ತಿಗೆ, ಹಾದಿ ತುಂಬಿದ ಕೆಂಪು ಪಕಳೆಗಳನ್ನ ತೇಲಿಸಿಕೊಂಡು ಬಣ್ಣದೋಕುಳಿಗೆ ಬೀದಿಯನ್ನಿಳಿಸುವ ಮುಂಗಾರ ಮೊದಲ ಮಳೆ. ಅದೊಂದು ಸಂಭ್ರಮ, ಎಲ್ಲೆಲ್ಲಿಂದಲೋ, ಕತ್ತಲೆಗೊಂದಿಷ್ಟು, ಬೆಳಕಿಗೊಂದಿಷ್ಟು ಸೋತು ಹೊರಬರುವ ಕೀಟ, ಯಾತ್ಯಾತರದೋ ಹೂ, ಎಂಥದ್ದೋ ಬಳ್ಳಿ ಚಿಗುರು, ಮಾವು ನೆಲಕಚ್ಚಿ ನೆರಳೆ ಹೀಚು, ಭರಪೂರ ಕವಳೆ ಹಣ್ಣಪ್ಪು, ಈಗಷ್ಟೆ ಕಾಲೇಜು ಪ್ರವೇಶ ಪಡೆದ ಯುವಗಣ್ಣಿನ ತುಂಬ ಹೆಣ್ಣು ಹೆಪ್ಪು!

ಊರು ಕೆರೆಯಾಗಿ, ಕೆರೆಯ ಊರಾಗಿ, ಕೆರೆ ಬದುವಿಗುಂಟ ಈಗಲೂ ಜೀವಂತ ಸಾಲು ನವಿಲ ಕೇಕೆ, ರಜೆ ಮಂಜೂರು ಕೋಗಿಲೆಗೆ. ಬೆಳಗು ಮೂಡುವ ಮನಸಿಲ್ಲದೇ ಅರೆಗಣ್ಣ ತೆರೆದು ಬೆಳಕಾಗುತ್ತದೆ! ಏಳುವ ಮನಸಿಲ್ಲದೆ ಎದ್ದು ಹುಡುಗ ಹುಡುಗಿಯರು, ಮಳೆಯನ್ನ ಬೈಯ್ಯುತ್ತಲೆ ಶಾಲೆ ಕಾಲೇಜಿಗೆ, ನೆನೆಯುತ್ತಲೆ ಹೊರಟು ನಿಂತರೆ, ಬೆನ್ನ ತುಂಬ, ಹವಾಯಿ ಹೆಜ್ಜೆ ಚಿಮ್ಮಿದ ಮಣ್ಣ ಕಲೆಯ ಹೂಕುಂಡ ಮಳೆಯ ಮುಗುಳು!

ಹಸಿ ಬಟ್ಟೆ, ಮನೆ ತುಂಬ ಹಸಿ ಹಸಿ ಹಸಿಯ ವಿಶಿಷ್ಟ ವಾಸನೆ, ಮಲೆನಾಡು ಬಚ್ಚಲ ಮನೆ ರೂಪಕಕ್ಕೆ ಹೊಂದಿಕೊಂಡರೆ, ಧಾರವಾಡ ಬಾಣಂತಿ ಮನೆಗೆ ಉಪಮೆ. ಮಗುವಿನ ರಚ್ಚೆ, ಕಿಲಕಿಲ, ಅಳು, ಎಲ್ಲ ಸ್ವರಗಳ ಸ್ವರಗಳ ಕಂಠಸ್ಥ ಮಳೆ, ತೆವಳು, ಉರುಳು, ಅಂಬೆಗಾಲು ಕಲಿತು ಇನ್ನೇನು ಹೊಸ್ತಿಲು ದಾಟಬೇಕು, ಬಂತು ಶ್ರಾವಣ. ಅದರ ಪವಾಡವೆ ಬೇರೆ. ಬೇಂದ್ರೆ ಹಾಡಿದಷ್ಟು ಬೆಳೆದ, ಬೇಂದ್ರೆ ಹಾಡಿದಷ್ಟು ಉಳಿದ, ಜೀವಕಳೆ, ನವರಸದ ಹೊಳೆ, ಮಳೆ.

**–ರಾಜಕುಮಾರ ಮಡಿವಾಳರ,**
ಧಾರವಾಡ

ಜಯಂತ್ ಕಾಯ್ಕಿಣಿ ಅವರಂತೂ ಮಳೆ ಕವಿ ಎಂದೇ ಹೆಸರು ಪಡೆದವರು. 'ಬಾ ಮಳೆಯೇ ಬಾ' ಎಂದು ಹಾಡಿದರು ಬಿ.ಆರ್. ಲಕ್ಷ್ಮಣರಾಯರು. 'ಮಳೆಯು ತಂತಿ, ಮನದ ಒಡಲಲ್ಲಿ ಮೀಟಿ ರಾಗ ಹೊಮ್ಮಿತು' ಅನ್ನುವ ಮಾತು ಜಿ.ಎಸ್. ಶಿವರುದ್ರಪ್ಪ ಅವರದು. ಮಳೆಯ ಬಗ್ಗೆ ಬರೆಯದ ಕವಿ ಇಲ್ಲ.

## ಸಿನಿಮಾದಲ್ಲಿ ಸಮೃದ್ಧ ಮಳೆ!

ಚಿತ್ರಗೀತೆಗಳಂತೂ ಸಮೃದ್ಧವಾಗಿ ಮಳೆಯ ಹಾಡುಗಳನ್ನು ಹೊಂದಿವೆ. 'ಸ್ವಾತಿ ಮುತ್ತಿನ ಮಳೆಹನಿಯೇ', 'ಮಳೆ ಬಂತು ಮಳೆ ಬಂತು', 'ಮಳೆ ಬರುವ ಹಾಗಿದೆ', 'ಮಳೆ ನಿಂತು ಹೋದ ಮೇಲೆ' ಹೀಗೆ ಹಲವಾರು ಮಳೆಯ ಗೀತೆಗಳನ್ನು ಹೇಳುತ್ತಾ ಹೋಗಬಹುದು.

ಪ್ರೇಮಕ್ಕೆ, ಕಾವ್ಯಕ್ಕೆ, 'ಮುಂಗಾರು ಮಳೆಯೇ' ಅಂತ ಹಾಡಿದರೆ, ಚಲನಚಿತ್ರಗಳಲ್ಲಿ ಭಯಾನಕ ಸನ್ನಿವೇಶಗಳಲ್ಲಿ ಮಳೆಯ ಸದ್ದನ್ನು ನಿರ್ದೇಶಕರು ರೌದ್ರ ರೂಪದಲ್ಲೂ ಬಳಸಿದ್ದಾರೆ, ಕೆಜಿಎಫ್, ಓಂ ಮುಂತಾದ ಚಿತ್ರಗಳನ್ನು ನೆನಪಿಸಿಕೊಳ್ಳಿ.

ತಬರನ ಕಥೆ, ತಾಯಿ ಸಾಹೇಬ, ದ್ವೀಪ ಚಿತ್ರಗಳಲ್ಲಿ ಮಳೆಯೇ ನಾಯಕನ ಹಾಗೆ ಹೇಳಬೇಕಾದದ್ದು ಹೇಳಿತೋ ಎಂದು ಭಾಸವಾಗುತ್ತದೆ. ಗೀತಾಂಜಲಿ, ಅಮೃತವರ್ಷಿಣಿ, ಗಾಳಿಪಟ ಚಿತ್ರಗಳೂ ಮಳೆಯ ಮುದ ನೀಡಿವೆ. 'ಮಳೆಯಲ್ಲಿ ಎಂತಹ ಕ್ರೂರಿಯೂ ಆರ್ದ್ರನಾಗುತ್ತಾನೆ' ಎನ್ನುತ್ತಾರೆ ಮುಂಗಾರು ಮಳೆ ನಿರ್ದೇಶಕ ಯೋಗರಾಜಭಟ್ಟರು. ಚಿತ್ರದ ಉದ್ದಕ್ಕೂ ಮಳೆ ಬಳಸಿದ್ದೇನೆ. ಅದು ಒಂದು ಭಾವದ ಅಭಿವ್ಯಕ್ತಿ ಎಂದಿದ್ದಾರೆ.

ಮಳೆಯೆಂದರೆ ಪ್ರೀತಿಯ ಚಿತ್ರವನ್ನು ಶಾಂತಿಯ ಕ್ಯಾನ್ವಾಸ್‌ನಲ್ಲಿ ಬಿಡಿಸುವ ಕುಂಚ! ಸುರಿಮಳೆಯಲ್ಲಿ ಪ್ರೀತಿಯ ಒಡನಾಟವೂ ಇದೆ, ಶಾಂತಿಯ ತಂಪೂ ಇದೆ. ಕರ್ನಾಟಕದ ಮಲೆನಾಡಿನ

